▸ ದುಡಿಯುವ ಮಹಿಳೆಯಾಗಿ ಹೆಣ್ಣು ಮಕ್ಕಳ ಪಾತ್ರ ಸಮಾಜದಲ್ಲಿ ಬದಲಾಗಿದೆ. ಆರ್ಥಿಕ ಸ್ವಾತಂತ್ರ್ಯ ಅವರಿಗೆ ಬಿಡುಗಡೆಯನ್ನೂ ಕೊಡಬಹುದು, ದುಡಿಯುವ ಯಂತ್ರವನ್ನಾಗಿಯೂ ಮಾಡಬಹುದು. ತಾಯಿಯಾಗಿ ಮಕ್ಕಳಿಗೆ ಕೊಡಬೇಕಾದ ಸಮಯವನ್ನು ಕೊಡಲು ಅವಳಿಗೆ ಸಾಧ್ಯವಾಗದಿರಬಹುದು. ಒಬ್ಬ ಗೃಹಿಣಿಯಾಗಿ ಮಹಿಳೆ ಎದುರಿಸುತ್ತಿರುವ ಈ ಸಂಕೀರ್ಣ ಸವಾಲನ್ನು ಹೇಗೆ ನೋಡುತ್ತೀರಿ?

'ಒಂದನ್ನು ಪಡೆದುಕೊಳ್ಳಬೇಕಾದರೆ ಮತ್ತೊಂದನ್ನು ಕಳೆದುಕೊಳ್ಳಲು ಸಿದ್ಧರಿರಬೇಕು' ಅನ್ನುವ ಮಾತೊಂದಿದೆ. ದುಡಿಯುವ ಮಹಿಳೆಗೆ ಇದನ್ನು ಅನ್ವಯಿಸಿ ಹೇಳುವುದಾದಲ್ಲಿ ತನ್ನ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಅವಳು ತನ್ನ ಕುಟುಂಬ, ನೆಮ್ಮದಿ, ಆರೋಗ್ಯ ಎಲ್ಲವನ್ನೂ ಅಡವಿಟ್ಟು ದುಡಿಯುವ ಯಂತ್ರವಾಗಿದ್ದಾಳೆಯೇ ಎಂದು ಕೇಳಿಕೊಂಡರೆ ಹಾಗಾಗಬೇಕಾದ್ದೇನಿಲ್ಲ ಎನ್ನುವ ಉತ್ತರ ಕೆಲವೊಂದು ಸಂಸಾರಗಳಲ್ಲಿಯಾದರೂ ಕೇಳಿ ಬರಬಹುದು. ದುಡಿಯುವ ಹೆಂಡತಿಯ ಕಷ್ಟ ಸುಖಗಳನ್ನು ಅರ್ಥೈಸಿಕೊಂಡು ಗಂಡನಾದವನು ಗೃಹಕೃತ್ಯದಲ್ಲಿ ಅವಳಿಗೆ ಕೈ ಜೋಡಿಸಿದರೆ ಅವಳ ಹೆಗಲ ಹೊರೆ ಅಲ್ಪವಾದರೂ ತಗ್ಗೀತು. ಆ ಬುದ್ಧಿ, ಮನಸ್ಸು ಗಂಡನಾದವನಿಗೆ ಇರಬೇಕು, ಅಷ್ಟೇ. ತಾಯಿಯಾಗಿ ಅವರು ಮಕ್ಕಳಿಗೆ ಕೊಡಬೇಕಾದಷ್ಟು ಸಮಯ ಕೊಡಲಾಗುವುದಿಲ್ಲ ಅನ್ನುವುದು ಸತ್ಯ. ಆದರೆ ಕಳೆದುಕೊಂಡ ಈ ಸುಖ ಇನ್ನೊಂದು ರೀತಿಯಲ್ಲಿ ಪ್ರಕಟವಾಗುವುದು ನಿಜ. ದುಡಿಯುವ ಅಮ್ಮಂದಿರ ಮಕ್ಕಳು ಬಹುಬೇಗ ಸ್ವಂತಿಕೆ ಗಳಿಸಿಕೊಳ್ಳುತ್ತಾರೆ. ಎಲ್ಲದಕ್ಕೂ ಅಮ್ಮನೇ ಬೇಕು ಎನ್ನುವ ಅವಲಂಬನೆಯಿಂದ ಹೊರಬಂದು ತಮ್ಮ ಕೆಲಸ ತಾವೇ ಮಾಡಿಕೊಳ್ಳುವಷ್ಟು ಪ್ರಬುದ್ಧರಾದರೆ ಆಶ್ಚರ್ಯವೇನಿಲ್ಲ.

▸ ನಿಮ್ಮ ಬರವಣಿಗೆ ಎಂ.ಕೆ. ಇಂದಿರಾ ಬರಹಗಳನ್ನು ನೆನಪಿಸುತ್ತದೆ. ಈ ಬಗೆಯ ಓದುಗರನ್ನು ಒಲಿಸಿಕೊಳ್ಳುವ ಬರವಣಿಗೆ ಹೇಗೆ ಸಾಧ್ಯವಾಯ್ತು?

ಎಂ.ಕೆ. ಇಂದಿರಾ ಅವರು ಬರೆಯುತ್ತಿದ್ದ ಮಲೆನಾಡಿನ ಆಡುಭಾಷೆ, ಜೀವನಶೈಲಿ ಅದೇ ಮಲೆನಾಡಿನವಳಾದ ನನ್ನ ಕತೆಗಳಲ್ಲಿ ಕಂಡು ಬರುವುದರಿಂದ ಈ ಹೋಲಿಕೆ. ನನ್ನ ಬರವಣಿಗೆಗೆ ಓದುಗರನ್ನು ಒಲಿಸಿಕೊಳ್ಳುವ ಶಕ್ತಿ ಇದೆಯೇ, ಇಲ್ಲವೆ ಓದುಗರು ಹೇಳಬೇಕು. ನನ್ನ ಬರವಣಿಗೆಯ ಕುರಿತು ನಾನೇನು ಹೇಳಬಲ್ಲೆ? ನಾನು ಹುಟ್ಟಿ ಬೆಳೆದ ಸ್ಥಳದಲ್ಲಿನ ಆಡು ಭಾಷೆ ಸ್ವಾಭಾವಿಕವಾಗಿ ನನ್ನ ಕತೆಗಳಲ್ಲಿ ಬಳಕೆಯಾಗಿದೆ.

▸ ತೀರ್ಥಹಳ್ಳಿ, ಹೊಸನಗರ, ಶಿವಮೊಗ್ಗ ಪ್ರದೇಶಗಳಲ್ಲಿ ನಿಮ್ಮ ಬದುಕಿನ ಬಹುಪಾಲು ಕಾಲವನ್ನು ಕಳೆದಿದ್ದೀರಿ. ಆಗ ಈ ಪ್ರದೇಶಗಳು ಸಮಾಜವಾದಿ ಚಟುವಟಿಕೆಯ ಕೇಂದ್ರವಾಗಿದ್ದವು. ಈಗ ಅಲ್ಲಿನ ಕೋಮುವಾದ, ನಕ್ಸಲ್, ಪರಿಸರ ನಾಶದಂತಹ ಚಟುವಟಿಕೆಗಳು ಹಲವು ಪಲ್ಲಟಗಳಿಗೆ ಕಾರಣವಾಗಿವೆ. ಆ ಪಲ್ಲಟಗಳು ನಿಮ್ಮ ಸಾಹಿತ್ಯವನ್ನು ಪ್ರಭಾವಿಸಿಲ್ಲವೇ? ಒಬ್ಬ ಲೇಖಕಿಯಾಗಿ ಅದನ್ನು ಹೇಗೆ ನೋಡುತ್ತೀರಿ? ಆ ಕುರಿತು ನಿಮ್ಮ ಪ್ರತಿಕ್ರಿಯೆ ಏನು?

ಆಗ ಜನ ಒಗ್ಗಟ್ಟಿನಿಂದಲೇ ಇರ್ತಿದ್ರು. ಆದ್ರೆ ಪ್ರಸ್ತುತ ಕಾಲಮಾನದಲ್ಲಿ ಪರಸ್ಪರ ಅಪನಂಬಿಕೆ ಅನ್ನೋದೇ ವಿಜೃಂಭಿಸುತ್ತಿರೋದು ಆತಂಕಕಾರಿ ವಿಷಯ. ಹೊಸನಗರ ತಾಲ್ಲೂಕಿನ ನಗರ ನನ್ನ